




# ಕನಕನ ಕಂಡೀರಾ?

■ ದಸ್ತಗೀರಸಾಬ್ ದಿನ್ನಿ





**ಕನಕದಾಸರ ಜೀವನ, ಸಾಹಿತ್ಯದ ಒಳನೋಟಗಳನ್ನು ಕಲಾಕೃತಿಗಳ ಮೂಲಕ ಅಭಿವ್ಯಕ್ತಿಸುವ ವಿಶಿಷ್ಟ ಪ್ರಯತ್ನವಿದು.**

ಕನ್ನಡ ಸಾಹಿತ್ಯ ಕಂಡ ಎರಡು ಅಪರೂಪದ ಚಳವಳಿಗಳು: ವಚನ ಚಳವಳಿ ಮತ್ತು ದಾಸ ಚಳವಳಿ. ಇವು ಕನ್ನಡ ಸಾಹಿತ್ಯದ ಎರಡು ಕಣ್ಣುಗಳಿದ್ದಂತೆ. ಶರಣರು ಮೂಢನಂಬಿಕೆ, ಕಂದಾಚಾರ, ಜಾತೀಯತೆ ವಿರುದ್ಧ ಹೋರಾಡಿದರು. ಬಾಯಿಯಿದ್ದೂ ಮೂಕರಾಗಿದ್ದವರಿಗೆ ದನಿ ಕೊಟ್ಟರು. ದಾಸರು ಕೂಡ ಮೂಢನಂಬಿಕೆಗೆ ಪ್ರತಿರೋಧ ಒಡ್ಡುತ್ತಲೇ ಮಾನವೀಯ ಮೌಲ್ಯಗಳಿಗಾಗಿ ಮಿಡಿದರು. ಶರಣರು ಆಡುಭಾಷೆಗೆ ಸಾಹಿತ್ಯದ ಸ್ಪರ್ಶ ನೀಡಿದರೆ, ದಾಸರು ಸಾಹಿತ್ಯಕ್ಕೆ ತಾಳ, ಲಯ, ಸಂಗೀತದಿಂದ ಜೀವ ತುಂಬಿದರು.

ದಾಸ ಸಾಹಿತ್ಯದಲ್ಲಿ ಕನಕದಾಸರಿಗೆ ವಿಶಿಷ್ಟ ಸ್ಥಾನವಿದೆ. ಕನಕದಾಸರ ಮೂಲ ಹೆಸರು ತಿಮ್ಮಪ್ಪ ನಾಯಕ. ಯೋಧರಾಗಿದ್ದ ಕನಕರು ಹಿಂಸೆಯ ಸ್ವರೂಪ ಕಂಡುಂಡು ಅನುಭಾವದ ಬದುಕಿನೆಡೆ ಹೊರಳುತ್ತಾರೆ. ವ್ಯಾಸತೀರ್ಥರಂತಹ ಗುರುಗಳನ್ನು ಪಡೆದು ದಾಸ